**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. 69/2024**

ಫಿರ್ಯಾದುದಾರರುಃ ಸರ್ಕಾರದ ಪರ ಹುಣಸೂರು ಪಟ್ಟಣ ಪೊಲೀಸ್ ಠಾಣೆ,
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಃ

1. ಚಂದ್ರ ಅಲಿಯಾಸ್ ಚಂದ್ರಶೇಖರ,
   ಬಿನ್ ಚಿಕ್ಕೇಗೌಡ
   ಸುಮಾರು 45 ವರ್ಷ

2. ಈರಣ್ಣ ಅಲಿಯಾಸ್ ಈರಣ್ಣೇಗೌಡ ,
   ಬಿನ್ ಲೇಟ್ ನಿಂಗೇಗೌಡ,
   ಸುಮಾರು 52 ವರ್ಷ

3. ಕೆಂಡೇಗೌಡ, ಬಿನ್ ಲೇಟ್ ಜವರೇಗೌಡ,
   ಸುಮಾರು 62 ವರ್ಷ

4. ಸಾಕಮ್ಮ , ಬಿನ್ ಕೆಂಡೇಗೌಡ,
   ಸುಮಾರು 50 ವರ್ಷ

5. ಸಣ್ಣಮ್ಮ ಕೋಂ ಲೇಟ್ ಚಿಕ್ಕೇಗೌಡ,
   ಸುಮಾರು 77 ವರ್ಷ

6. ಮಲ್ಲಮ್ಮ, ಬಿನ್ ಲೇಟ್ ಚಿಕ್ಕೆಗೌಡ,
   ಸುಮಾರು 68 ವರ್ಷ,

7. ಶಿವಮ್ಮ, ಬಿನ್ ಲೇಟ್ ದೊಡ್ಡಸ್ವಾಮಿಗೌಡ,
   ಸುಮಾರು 48 ವರ್ಷ

8. ಅಭಿ ಅಲಿಯಾಸ್ ಬೀರೇಶ
   ಬಿನ್ ದೊಡ್ಡಸ್ವಾಮಿಗೌಡ,
   ಸುಮರು 40 ವರ್ಷ

ಎಲ್ಲರ ವಾಸ ಮಂಟಿ ಕೊಪ್ಪಲು ಗ್ರಾಮ
ಹುಣಸೂರು ತಾಲ್ಲೂಕು, ಮೈಸೂರು.

**ದೋಷಾರೋಪಣೆ**

**ಶ್ರೀಮತಿ. ಶಿರಿನ ಜಾವೀದ್ ಅನ್ಸಾರಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ದಿನಾಂಕಃ 21.11.2023 ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಹುಣಸೂರು ಪಟ್ಟಣ ಠಾಣಾ ಸರಹದ್ದಿಗೆ ಸೇರಿದ ಬೀಜಗನಹಳ್ಳಿ ಗ್ರಾಮದ ಎಲ್ಲೆಗೆ ಸೇರಿದ ಸರ್ವೆ ನಂಬರ್ 87/2 ರಲ್ಲಿ 0.20 ಗುಂಟೆ ಮತ್ತು ಸರ್ವೆ ನಂಬರ್ 87/13 ರಲ್ಲಿ 0.05 ಗುಂಟೆ ಜಮೀನನ್ನು ಚಾಸಾ-1 ರವರು ದಿನಾಂಕ 24.08.2022 ರಲ್ಲಿ ಚಾಸಾ-4 ರವರ ಹೆಸರಿನಲ್ಲಿ ಖರೀದಿಸಿದ್ದು, ನಂತಇರ ದಿನಾಂಕ 6.7.2023 ರಲ್ಲಿ ಚಾಸಾ-4 ರವರು ಚಾಸಾ-1 ರಿಗೆ ಸದರಿ ಜಮೀನನ್ನು ದಾನ ಮಾಡಿದ್ದು, ಸದರಿ ಜಮೀನನ್ನು ಹದ್ದುಬಸ್ತು ಮಾಡಿಸಿ, ಚಾಸಾ-1 ರವರು ತಮ್ಮ ಸುಪರ್ದಿಗೆ ಪಡೆದುಕೊಂಡಿದ್ದು, ಸದರಿ ಜಮೀನನ್ನು ಚಾಸ -1 ರವರು ಚಾಸಾ-4 ರಿಂದ 8 ರವರ ಜೊತೆ ಟ್ರಾಕ್ಟರ್ ನಲ್ಲಿ ಉಳುಮೆ ಮಾಡಲು ಹೋದಾಗ ಪಕ್ಕದ ಜಮೀನಿನವರಾದ 1 ರಿಂದ 8 ನೇ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 8 ನೇ ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಅಕ್ರಮ ಕೂಟದ ಸದಸ್ಯರಾಗಿರುತ್ತೀರಿ. ಚಾಸಾ-1 ಮತ್ತು ಚಾಸಾ-4 ರವರು ಜಮೀನಿನಲ್ಲಿ ಉಳುಮೆ ಮಾಡುತ್ತಿರುವಾಗ ಉಳುಮೆ ಮಾಡಲು ಬಿಡದೇ ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 149 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 8 ನೇ ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಅಕ್ರಮ ಕೂಟದ

ಸದಸ್ಯರಾಗಿರುತ್ತೀರಿ. ಚಾಸಾ–1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಚಾಸಾ–1 ರವರನ್ನು ಅಡ್ಡಗಟ್ಟಿ ತಳ್ಳಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 149 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 8 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟದ ಸದಸ್ಯರಾಗಿ, ಚಾಸಾ–1 ಮತ್ತು ಚಾಸಾ–4 ರವರು ಜಮೀನಿನಲ್ಲಿ ಉಳುಮೆ ಮಾಡುತ್ತಿರುವಾಗ ಉಳುಮೆ ಮಾಡಲು ಬಿಡದೇ ಚಾಸಾ–1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮುಂದುವರೆದು, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 8 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟದ ಸದಸ್ಯರಾಗಿ, ಚಾಸಾ–1 ಮತ್ತು ಚಾಸಾ–4 ರವರು ಜಮೀನಿನಲ್ಲಿ ಉಳುಮೆ ಮಾಡುತ್ತಿರುವಾಗ ಉಳುಮೆ ಮಾಡಲು ಬಿಡದೇ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ–1 ಮತ್ತು 4 ರಿಗೆ ಜಮೀನಿನ ಒಳಗೆ ಮತ್ತೆ ಬಂದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿತರು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 05.03.2024.

**(ಶಿರಿನ ಜಾವೀದ್ ಅನ್ಸಾರಿ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹುಣಸೂರು.